ಮೌನವಾಗಿ ಕೆಲಸ ಮಾಡುವವರನ್ನು ಯಾರೂ ಗಮನಿಸುವುದಿಲ್ಲ!



✍️ **ಶ್ರೀವಲ್ಲಿ ರೈ ಮಾರ್ಟೆಲ್**

ಒಮ್ಮೆ ಹೊಟ್ಟೆ, ಕೈಗಳು, ಕಾಲುಗಳು, ನಾಲಿಗೆ, ಹಲ್ಲುಗಳು ಮತ್ತು ಕಣ್ಣುಗಳ ನಡುವೆ ಜಗಳವಾಯಿತು. ಉಳಿದ ಅಂಗಗಳು ಅಸಮಾಧಾನದಿಂದ,"ನಾವು ಎಲ್ಲರೂ ಎಷ್ಟೊಂದು ಕಷ್ಟಪಟ್ಟು ಕೆಲಸ ಮಾಡುತ್ತೇವೆ. ಆದರೆ ಹೊಟ್ಟೆ ಮಾತ್ರ ಏನೂ ಕೆಲಸ ಮಾಡದೆ ಕುಳಿತು ತಿನ್ನುತ್ತದೆ!" ಎಂದು ದೂರಿದವು.
ಕಣ್ಣುಗಳು ಹೇಳಿದವು: "ತಿನ್ನಲು ಬೇಕಾದ ಹಣ್ಣು, ತರಕಾರಿ, ಗೆಡ್ಡೆ-ಗೆಣಸುಗಳನ್ನು ಹುಡುಕಿ, ಗುರುತಿಸುವುದು ನಾನೇ."
ಕೈಗಳು ಮತ್ತು ಕಾಲುಗಳು ಹೇಳಿದವು:
"ನಾವು ಒಟ್ಟಾಗಿ ಕೆಲಸ ಮಾಡಿ, ಅಗೆಯುತ್ತೇವೆ, ಮರ ಹತ್ತುತ್ತೇವೆ, ಕಾಡಿಗೆ ಹೋಗುತ್ತೇವೆ ಮತ್ತು ಅವುಗಳನ್ನು ಹೊತ್ತುಕೊಂಡು ಬರುತ್ತೇವೆ."
ಹಲ್ಲುಗಳು ಮತ್ತು ನಾಲಿಗೆ ಹೇಳಿದವು:
"ನಾವು ಅವುಗಳನ್ನು ಅಗಿದು, ರುಚಿ ನೋಡಿ, ಉಪ್ಪು-ಖಾರವನ್ನು ಸೇರಿಸಿ, ಆಹಾರವನ್ನು ಬಾಯಿಯ ಮೂಲಕ ಹೊಟ್ಟೆಗೆ ಕಳುಹಿಸುತ್ತೇವೆ. ಆದರೆ ಹೊಟ್ಟೆ ಮಾತ್ರ ಎಷ್ಟು ಆರಾಮವಾಗಿ ಕುಳಿತುಕೊಂಡು ತಿನ್ನುತ್ತದೆ! ಅದಕ್ಕೆ ಸ್ವಲ್ಪವೂ ನಾಚಿಕೆಯೇ ಇಲ್ಲ!" ಹೀಗೆ ಎಲ್ಲರೂ ಒಟ್ಟಾಗಿ ಸೇರಿ ಹೊಟ್ಟೆಯನ್ನು ಹಾಸ್ಯ ಮಾಡತೊಡಗಿದವು.
ತಮ್ಮ ನಡುವಿನ ಜಗಳವನ್ನು ನೋಡಿದ ಹೊಟ್ಟೆಗೆ ತುಂಬಾ ನೋವಾಯಿತು.
"ನಾನು ಒಳಗೆ ಕುಳಿತು ಮಾಡುವ ಕೆಲಸವನ್ನು ಯಾರೂ ಗಮನಿಸುವುದಿಲ್ಲ. ಸರಿ, ಇವರಿಗೆ ನನ್ನ ಕೆಲಸದ ಮಹತ್ವವನ್ನು ತಿಳಿಸುತ್ತೇನೆ," ಎಂದು ಯೋಚಿಸಿ, ಹೊಟ್ಟೆ ಉಪವಾಸ ಸತ್ಯಾಗ್ರಹಕ್ಕೆ ಕುಳಿತಿತು. ಅದು ಘೋಷಿಸಿತು:

"ನೀವು ಎಷ್ಟೇ ಕಷ್ಟಪಟ್ಟು ಆಹಾರವನ್ನು ತಂದರೂ, ಇನ್ನು ಮುಂದೆ ನಾನು ಅದನ್ನು ಸ್ವೀಕರಿಸುವುದಿಲ್ಲ." ಒಂದು ದಿನ ಕಳೆಯಿತು. ಎರಡು ದಿನ ಕಳೆಯಿತು. ನಾಲ್ಕನೇ ದಿನಕ್ಕೆ ಬಂದಾಗ, ಕಣ್ಣುಗಳು ತಾವು ಇದ್ದ ಜಾಗದಲ್ಲೇ ತಲೆ ಸುತ್ತಿ ತಿರುಗತೊಡಗಿದವು. ಕೈಗಳನ್ನು ಮೇಲಕ್ಕೆ ಎತ್ತಲೂ ಸಾಧ್ಯವಾಗಲಿಲ್ಲ. ಕಾಲುಗಳು ಮುಂದೆ ಹೆಜ್ಜೆ ಇಡಲೂ ಆಗಲಿಲ್ಲ. ನಾಲಿಗೆ ತಿರುಗಲಿಲ್ಲ. ಗಂಟಲು ಸಂಪೂರ್ಣ ಒಣಗಿಹೋಯಿತು.
ಆಗ ಕೈಗಳು, ಕಾಲುಗಳು ಮತ್ತು ನಾಲಿಗೆಗೆ ಇದೆಲ್ಲವೂ ಹೊಟ್ಟೆ ಉಪವಾಸ ಮಾಡಿದ್ದರಿಂದಲೇ ಆಗುತ್ತಿದೆ ಎಂಬುದು ಅರ್ಥವಾಯಿತು.

ಅಅವು ಹೊಟ್ಟೆಯ ಬಳಿ ಹೋಗಿ ಬೇಡಿಕೊಂಡವು:
“ದಯವಿಟ್ಟು ನಿಮ್ಮ ಉಪವಾಸವನ್ನು ಮುಗಿಸಿ. ಇಲ್ಲವಾದರೆ ನಾವೆಲ್ಲರೂ ಸತ್ತುಹೋಗುತ್ತೇವೆ! ನೀವು ಮೌನವಾಗಿ ಮಾಡುವ ಕೆಲಸದ ಮಹತ್ವವನ್ನು ನಾವು ಅರ್ಥಮಾಡಿಕೊಳ್ಳಲಿಲ್ಲ. ಇನ್ನು ಮುಂದೆ ನಾವು ನಿಮ್ಮ ಮಾತನ್ನು ಕೇಳುತ್ತೇವೆ. ದಯವಿಟ್ಟು ಸ್ವಲ್ಪವಾದರೂ ಆಹಾರವನ್ನು ಸ್ವೀಕರಿಸಿ. ನಮ್ಮಲ್ಲಿ ಇನ್ನು ಶಕ್ತಿಯೇ ಉಳಿದಿಲ್ಲ.” ಎಂದು ಹೇಳಿ ಅವು ಹೊಟ್ಟೆಯ ಕಾಲಿಗೆ ಬಿದ್ದವು.

ಆಗ ಹೊಟ್ಟೆ ಹೇಳಿತು: “ಮನೆಯ ತಾಯಿಯಂತೆ, ನೀವು ಕಷ್ಟಪಟ್ಟು ತಂದುಕೊಟ್ಟ ಆಹಾರವನ್ನು ನಾನು ಜೀರ್ಣಿಸಿ, ಅದರಿಂದ ದೊರೆಯುವ ಶಕ್ತಿಯನ್ನು ನಿಮ್ಮ ದೇಹದ ಪ್ರತಿಯೊಂದು ಭಾಗಕ್ಕೂ ತಲುಪಿಸುತ್ತಿದ್ದೆ. ಆದರೆ ನೀವು ನನ್ನ ಕೆಲಸವನ್ನು ಗಮನಿಸಲಿಲ್ಲ.

ಮೌನವಾಗಿ ಕೆಲಸ ಮಾಡುವ ವ್ಯಕ್ತಿಯ ಕೆಲಸವನ್ನು ಯಾರೂ ಗುರುತಿಸುವುದಿಲ್ಲ. ಇದೇ ಈ ಪ್ರಪಂಚದ ರೀತಿ. ಕನಿಷ್ಠ ಇನ್ನು ಮುಂದಾದರೂ ಪ್ರತಿಯೊಬ್ಬರೂ ತಮ್ಮ ತಮ್ಮ ಕೆಲಸವನ್ನು ಸರಿಯಾಗಿ ಮಾಡಿ. ‘ನಾನು ಮಾತ್ರ ಕೆಲಸ ಮಾಡುತ್ತೇನೆ, ಅವರು ಕುಳಿತುಕೊಂಡು ತಿನ್ನುತ್ತಾರೆ’ ಎಂದು ಎಂದಿಗೂ ಭಾವಿಸಬೇಡಿ.”
ಆ ದಿನದಿಂದ ಕೈಗಳು, ಕಾಲುಗಳು, ನಾಲಿಗೆ ಮತ್ತು ಹಲ್ಲುಗಳು ಯಾರನ್ನೂ ದೂಷಿಸದೆ, ತಮ್ಮ ತಮ್ಮ ಕೆಲಸವನ್ನು ಮೌನವಾಗಿ ಮಾಡತೊಡಗಿದವು. ಎಲ್ಲರೂ ಆರೋಗ್ಯವಾಗಿ ಮತ್ತು ಬಲಿಷ್ಠವಾಗಿ ಬದುಕಿದರು.
ನೀತಿ:
ತಾನು ಮಾಡಿದ ಕೆಲಸವನ್ನು ಊರಿಗೇ ಸಾರಿಕೊಂಡು ಹೇಳುವವನೇ ಮಾತ್ರ ಕೆಲಸ ಮಾಡುತ್ತಾನೆ ಎಂದಲ್ಲ. ಅನೇಕ ಜನರು ಯಾರ ಗಮನಕ್ಕೂ ಬಾರದಂತೆ, ಮೌನವಾಗಿ, ತೆರೆಮರೆಯಲ್ಲಿ ತಮ್ಮ ಅಮೂಲ್ಯವಾದ ಕೆಲಸವನ್ನು ಮಾಡುತ್ತಿರುತ್ತಾರೆ!